1. ಹೊಸ ಹಿಪ್ಪುನೇರಳೆ ತಳಿ ಅಭಿವೃದ್ಧಿಗೆ ಪ್ರೋತ್ಸಾಹಧನ
2. ಹಿಪ್ಪುನೇರಳೆ ತೋಟಗಳಿಗೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ
3. ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ
4. ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳಿಗೆ ಸಹಾಯಧನ
5. ರೋಗ ನಿಯಂತ್ರಣಕ್ಕಾಗಿ ಸೋಂಕುನಿವಾರಕಗಳ ಸರಬರಾಜು
6. ರೇಷ್ಮೆ ಬೆಳೆಗಾರರಿಗೆ ತರಬೇತಿ ಮತ್ತು ಟೂಲ್‌ಕಿಟ್ ನೀಡುವುದು
7. ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣಕ್ಕೆ/ಸಲಕರಣೆಗಳಿಗೆ ಸಹಾಯಧನ
8. ಸ್ಥಳೀಯ ಭಾಷೆಗಳಲ್ಲಿ ದೃಶ್ಯ ಮತ್ತು ಪ್ರಚಾರ ಸಾಹಿತ್ಯ ಮುದ್ರಣ

ಇನ್ನಲ್ಲದೆ, ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ / ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಗಳಡಿ ಹಿಪ್ಪುನೇರಳೆ ಬೆಳೆಸಲು ಸಹಾಯಧನ / ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣಕ್ಕೆ ಸಹಾಯಧನ / ರೇಷ್ಮೆ ಹುಳು ಸಾಕುವ ಸಲಕರಣೆಗಳ ಸರಬರಾಜು.

ಇ) ಉಡುಪಿ ಜಿಲ್ಲೆಯು ಪಶ್ಚಿಮ ಘಟ್ಟಗಳ ಪ್ರದೇಶವಾಗಿದ್ದು ಹೆಚ್ಚು ಮಳೆಯಾಗುವ ತಿಂಗಳುಗಳಲ್ಲಿ ಹಿಪ್ಪುನೇರಳೆ ಸೊಪ್ಪಿನ ಲಭ್ಯತೆ ಇದ್ದರೂ ರೇಷ್ಮೆ ಹುಳು ಸಾಕಾಣೆ ಮಾಡುವುದು ಅಧಿಕವಾಗುತ್ತದೆ. ಈ ಪ್ರದೇಶದ ಸಣ್ಣ ಹಿಡುವಳಿದಾರರು ಹೆಚ್ಚಾಗಿದ್ದು, ದುಬಾರಿ ಕೂಲಿ ವೆಚ್ಚಗಳಿಂದಾಗಿ ಅವರಿಗೆ ರೇಷ್ಮೆ ಕೃಷಿ ಲಾಭದಾಯಕವಾಗುವುದಿಲ್ಲ. ಈ ಪ್ರದೇಶದಲ್ಲಿ ಸಾಮಾನ್ಯವಾಗಿ ವಾತಾವರಣದಲ್ಲಿ ಶೈತ್ಯಾಂಶ ಹೆಚ್ಚಾಗಿರುವ ಕಾರಣ ಉತ್ಪಾದನೆಯಾದ ಗೂಡುಗಳು ನೂಲು ಬಿಚ್ಚಲು ಸೂಕ್ತವಾಗಿರುವುದಿಲ್ಲ. ಅದರಿಂದಾಗಿ ಅತೀ ಕಡಿಮೆ ಬೆಲೆಗೆ ಮಾರಾಟವಾಗುತ್ತವೆ. ಆದ ಕಾರಣ ರೈತರು ರೇಷ್ಮೆ ಬೆಳೆಯಲು ಉತ್ಸಾಹ ತೋರುತ್ತಿಲ್ಲ.

ಈ)"ಆ" ದಲ್ಲಿ ನಮೂದಿಸಿರುವ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕೆ ರೇಷ್ಮೆ ಉಪ ನಿರ್ದೇಶಕರ ಕಛೇರಿ, ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, 2 ತಾಂತ್ರಿಕ ಸೇವಾ ಕೇಂದ್ರಗಳು, ರೇಷ್ಮೆ ವಿಸ್ತರಣಾ ಕೇಂದ್ರ ಮತ್ತು ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

1847(2619) ಶ್ರೀ ರಘುಪತಿ ಭಟ್ ಕೆ. (ಉಡುಪಿ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಪಶುಚಿಕಿತ್ಸಾಲಯಗಳು ಕಾರ್ಯನಿರತವಾಗಿದೆ (ಕ್ಷೇತ್ರವಾರು ಪಟ್ಟಿ ನೀಡುವುದು);

ಆ) ಈ ಚಿಕಿತ್ಸಾಲಯಗಳಿಗೆ ಯಾವ ಸವಲತ್ತುಗಳನ್ನು ನೀಡಲಾಗುತ್ತಿದೆ;

ಇ) ಇನ್ನೂ ಎಷ್ಟು ಹೊಸ ಚಿಕಿತ್ಸಾಲಯವನ್ನು ತೆರೆಯುವ ಯೋಜನೆ ಸರ್ಕಾರಕ್ಕಿದೆ;

ಈ) ನಗರ ಪ್ರದೇಶಗಳಲ್ಲಿ ಪಶು ಚಿಕಿತ್ಸಾಲಯಗಳು ಕಡಿಮೆ ಇದ್ದು ಹೊಸದಾಗಿ ಸ್ಥಾಪಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೆ;

ಉ) ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಪಶುಚಿಕಿತ್ಸಾ ಕೇಂದ್ರ ಸ್ಥಾಪನೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೆ;

ಊ) ಹಾಗಿದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಒಟ್ಟು 28 ಪಶುಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಕ್ಷೇತ್ರವಾರು ವಿವರ ಅನುಬಂಧದಲ್ಲಿ ನೀಡಿದೆ.

ಆ)ತಾಂತ್ರಿಕ ಸಿಬ್ಬಂದಿ ಔಷಧಿ, ಲಸಿಕೆ, ಪೀಠೋಪಕರಣ, ರೋಗ ನಿರ್ಣಯ ಪ್ರಯೋಗಾಲಯ, ಶೀಥಲೀಕರಣ ಯಂತ್ರ ಹಾಗೂ ಇತರೆ ಉಪಕರಣಗಳು, ಉಡುಪಿ ಮತ್ತು ಕುಂದಾಪುರಗಳಲ್ಲಿ ರೋಗ ತಪಾಸಣಾ ಪ್ರಯೋಗಾಲಯ ಒದಗಿಸಲಾಗಿದೆ.

ಇ) ರಾಜ್ಯದಲ್ಲಿ ಪಶುವೈದ್ಯಕೀಯ ಸಂಸ್ಥೆಗಳು ಸಾಕಷ್ಟು ಇದ್ದು ಹೊಸ ಪಶುಚಿಕಿತ್ಸಾಲಯಗಳನ್ನು ತೆರೆಯುವ ಕಾರ್ಯಕ್ರಮ ಪ್ರಸ್ತುತ ಇರುವುದಿಲ್ಲ. ಆದಾಗ್ಯೂ ಡಾ:ನಂಜುಂಡಪ್ಪ ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನಂತೆ ಎಲ್ಲಿ ಪಶುವೈದ್ಯಕೀಯ ಸಂಸ್ಥೆಗಳು ಜಾನುವಾರು ಸಂಖ್ಯೆಗೆ ಅನುಸಾರವಾಗಿ ಕಡಿಮೆ ಇರುವುದೋ ಅಂತಹ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಸಂಸ್ಥೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಈ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಉ) ಉಡುಪಿ ನಗರದಲ್ಲಿರುವ ಪಶು ಆಸ್ಪತ್ರೆಯು ಈಗಾಗಲೇ ಜಿಲ್ಲಾ ಪಶು ಆಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಊ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಅನುಬಂಧ-1

ಪ್ರಶ್ನೆ ಸಂಖ್ಯೆ: 2619

ಉಡುಪಿ	ಕಾಪು	ಬ್ರಹ್ಮಾವರ	ಕುಂದಾಪುರ	ಬೈಂದೂರು	ಕಾರ್ಕಳ
ಮಲ್ಪೆ	ಕಟಪಾಡಿ	ಸಾಸ್ತಾನ	ಶಂಕರನಾರಾಯಣ	ಬೈಂದೂರು	ಅಜ್ಕೈಕಾರ್
ಮಣಿಪಾಲ	ಶಿರ್ವ	ಕಲ್ಯಾಣಪುರ	ಬೆಳ್ವೆ	ಗುಜ್ಜಾಡಿ	ಬಜಗೋಳಿ
ಹಿರಿಯಡ್ಕ	ಪಡುಬೆಳ್ಳೆ	ಸಾಯಿಬ್ರಕಟ್ಟೆ	ಬಿದ್ಕರ್ ಕಟ್ಟೆ	ವಂಡ್ಸೆ	ಬೈಲೂರು
ಬೈರಂಪಳ್ಳಿ			ಕೆದೂರು	ಕೊಲ್ಲೂರು	ಪಳ್ಳಿ
ಕಡೆಕಾರ್			ಅಮಾಸೆಬೈಲು		ನಿಟ್ಟೆ
			ಹೆಮ್ಮಾಡಿ		ಕಲ್ಯಾ
			ಹುಣ್ಸೆಮಕ್ಕಿ		

1848(2338) ಶ್ರೀ ರಾಜೇಂದ್ರ ವರ್ಮ(ಹುಲಸೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಬಾಲಕ:ಬಾಲಕಿಯರ ವಸತಿ ನಿಲಯಗಳಿಗೆ ಸರ್ಕಾರ ಮಂಜೂರಾತಿ ನೀಡಿದೆ (ಮೂರು ವರ್ಷದ ವಿವರ ನೀಡುವುದು):

ಆ) ಹಾಗಾದರೆ ಹುಲಸೂರು ಕ್ಷೇತ್ರದಡಿ ಎಷ್ಟು:

ಇ) ಇವುಗಳು ಪ್ರಾರಂಭವಾಗಿವೆಯೇ: ಹಾಗೂ ಪ್ರಾರಂಭವಾಗದಿದ್ದರೆ ಎಷ್ಟು ಕಾಲಾವಧಿಯೊಳಗೆ ಪ್ರಾರಂಭಿಸಲಾಗುವುದು?